ಆ) ಪುನರ್ವಸತಿ ಕಾಲೋನಿಗಳಲ್ಲಿ ಮನೆಗಳ ನಿರ್ಮಾಣಕ್ಕೆ ಆಸರೆ ಯೋಜನೆಯಡಿ ಸರ್ಕಾರವು ಪ್ರಕಟಿಸಿದ್ದು, ಕಾರ್ಪೋರೇಟ್ ಸಂಸ್ಥೆಗಳು ಮತ್ತು ದಾನಿ ಸಂಸ್ಥೆಗಳು ಘೋಷಿಸಲಾದ ಮನೆ ಸಂಖ್ಯೆಗಳೆಷ್ಟು ಪೂರ್ಣ ವಿವರ ನೀಡುವುದು);

ಇ) ಮನೆಗಳನ್ನು ನಿರ್ಮಿಸಿ ಕೊಡುವುದಾಗಿ ಘೋಷಿಸಲಾದ ಕಾರ್ಪೊರೇಟ್ ಸಂಸ್ಥೆಗಳು ಮತ್ತು ದಾನಿ ಸಂಸ್ಥೆಗಳು ಅವರೇ ಸ್ವತಃ ಮನೆಗಳನ್ನು ನಿರ್ಮಿಸುತ್ತಿರುವರೇ ಅಥವಾ ಸರ್ಕಾರದ ಅಧೀನ ಸಂಸ್ಥೆಗಳ ಮುಖಾಂತರ ನಿರ್ಮಿಸಲಾಗುತ್ತಿದೆಯೇ (ಪೂರ್ಣ ವಿವರ ಒದಗಿಸುವುದು)?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ನೆರೆ ಪೀಡಿತ ಪ್ರದೇಶಗಳಲ್ಲಿ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಸರ್ಕಾರವು ಆಸರೆ ಯೋಜನೆಯಡಿಯಲ್ಲಿ ಸುಮಾರು 63213 ಮನೆಗಳನ್ನು ನಿರ್ಮಿಸುವ ಅವಶ್ಯಕತೆ ಇರುತ್ತದೆ.

ಆ) ದಾನಿ ಸಂಸ್ಥೆಗಳು/ಕಾರ್ಪೊರೇಟ್ ಸಂಸ್ಥೆಗಳು ಒಟ್ಟು ಮನೆಗಳನ್ನು ಕಟ್ಟಿಸಲು ಮುಂದೆ ಬಂದಿರುತ್ತಾರೆ. ಪ್ರತಿ ಮನೆ ವೆಚ್ಚ ರೂ. 1.00 ಲಕ್ಷದಂತೆ 63213 ಮನೆಗಳಿಗೆ ಅಂದಾಜಿಸಲಾದ ಮೊತ್ತ ರೂ. 63213.00 ಲಕ್ಷ.

ಇ) ದಾನಿ ಸಂಸ್ಥೆ/ಕಾರ್ಪೊರೇಟ್ ಸಂಸ್ಥೆಗಳು ಅವರ ಸ್ವತಃ ಮನೆಗಳನ್ನು ನಿರ್ಮಿಸುತ್ತಿರುವವರು. ದಾನಿ ಸಂಸ್ಥೆಯಾದ ಶ್ರೀ ಆದಿ ಚುಂಚನಗಿರಿ ಮಹಾ ಸಂಸ್ಥಾನಮಠ ಇವರು ಮಾತ್ರ ಸರ್ಕಾರಕ್ಕೆ ಹಣ ದೇಣಿಗೆ ನೀಡಲು ಒಪ್ಪಿರುತ್ತಾರೆ. ಅದರಂತೆ ಮೊದಲ ಕಂತಾಗಿ ಈ ದಾನಿಗಳು ಸರ್ಕಾರಕ್ಕೆ ರೂ. 10.00 ಕೋಟಿ ವಂತಿಗೆ ನೀಡಿರುತ್ತಾರೆ.

ಮುಳ್ಳಳ್ಳಿ ಗ್ರಾಮದ ಸ್ಥಳಾಂತರ

77 (1049) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆಯ ಕುಂದಗೋಳ ಮುಳ್ಳಳ್ಳಿ ಗ್ರಾಮವು ಬೆಣ್ಣೆ ಪ್ರವಾಹದಂದ ಸಂಪೂರ್ಣವಾಗಿ ನಾಶವಾಗಿರುವುದರಿಂದ ಬೇರೆ ಕಡೆಗೆ ಕಾರ್ಯವು ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳುವುದೇ;

ಆ) ಸಂತ್ರಸ್ಥರಿಗೆ ಕಟ್ಟಲು ಯಾವುದಾದರೂ ಯೋಜನೆಯನ್ನು ರೂಪಿಸಿರುವರೇ ಅಥವಾ ಯಾವುದೇ ಸಂಘ ಸಂಸ್ಥೆಗಳು ಮನೆ ಕಟ್ಟಿಸಿಕೊಡಲು ಮುಂದೆ ಬಂದಿವೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಸಂತ್ರಸ್ಥರಿಗೆ ಮನೆ ನಿರ್ಮಿಸಿ ಕೊಡಲಾಗುವುದು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಕುಂದಗೋಳ ತಾಲ್ಲೂಕಿನ ಮುಳ್ಳಳ್ಳಿ ಗ್ರಾಮವನ್ನು ಪೂರ್ಣವಾಗಿ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ. ಈಗಾಗಲೇ 16–ಎ–10 ಗುಂಟೆ ಜಮೀನು ಖರೀದಿಸಲಾಗಿದೆ. ಇನ್ನು 15 ಎ 25 ಗುಂಟೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲಾಗುತ್ತಿದ್ದು ಭೂ ಸ್ವಾಧೀನ 4(1)ರನ್ವಯ ಅಧಿಸೂಚನೆ ಹೊರಡಿಸಿದೆ. ಗ್ರಾಮ ಸ್ಥಳಾಂತರ ಕಾರ್ಯವನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಗುರಿ ಹೊಂದಿದೆ.

ಆ) ಸಂತ್ರಸ್ಥರಿಗೆ ಮನೆ ಕಟ್ಟಿ ಕೊಡಲು ಖರೀದಿಯಾದ ಜಮೀನಿನಲ್ಲಿ ಬಡವಣೆ ಅಭಿವೃದ್ಧಿ ಕೆಸ ಪ್ರಗತಿಯಲ್ಲಿದೆ ಕಾಮಗಾರಿ ಪೂರ್ಣಗೊಂಡೊಡನೆ ಮನೆ ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಇ) 6 ತಿಂಗಳು ಒಳಗಾಗಿ ಮನೆ ನಿರ್ಮಿಸಿಕೊಡುವ ಗುರಿ ಹೊಂದಲಾಗಿದೆ.

ಮಿನಿ ವಿಧಾನ ಸೌಧಗಳು

80 (538) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕುಮಟ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ; ಮೇಲ್ಕಂಡ ಮಿನಿವಿಧಾನ ಸೌಧವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಬಂದಿದ್ದಲ್ಲಿ ಮಿನಿವಿಧಾನಸೌಧದ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದೆಯೇ;